# ಸಿದ್ಧಗಂಗಾ

ಸಂಪುಟ-28. ಸಂಚಿಕೆ-10. ಅಕ್ಟೋಬರ್-1992.



ಪೂಜ್ಯ ಶ್ರೀ ಶ್ರೀಗಳವರು ಡಾ|| ಎಂ. ಸಿ. ಮೋದಿ ಅವರ ಸಂಚಾರಿ ನೇತ್ರ ಚಿಕಿತ್ಸಾ ಶಿಬಿರದ ಸುವರ್ಣ ಮಹೋತ್ಸವವನ್ನು ಬೆಂಗಳೂರಿನಲ್ಲಿ ಅಕ್ಟೋಬರ್ 4ರಂದು ಉದ್ಘಾಟಿಸಿದರು. ಚಿತ್ರದಲ್ಲಿ ಡಾ|| ಶ್ರೀ ಎಂ. ಸಿ. ಮೋದಿ, ಲೋಕಸಭೆಯ ಉಪಾಧ್ಯಕ್ಷ ಶ್ರೀ ಎಸ್. ಮಲ್ಲಿಕಾರ್ಜುನಯ್ಯ, ಆದಿಚುಂಚನಗಿರಿ ಮಠದ ಶ್ರೀ ಶ್ರೀ ಬಾಲಗಂಗಾಧರ ಸ್ವಾಮಿಗಳವರು, ಮತ್ತು ಸುತ್ತೂರು ಶ್ರೀ ಶ್ರೀಶಿವರಾತ್ರೀಶ್ವರ ಸ್ವಾಮಿಗಳು ಇದ್ದಾರೆ.

ಪ್ರಕಾಶಕರು:
ಹಳೆಯ ವಿದ್ಯಾರ್ಥಿಗಳ ಸಂಘ.
ಸಿದ್ಧಗಂಗಾ ಕ್ಷೇತ್ರ.

## ನಿಜವನರಿದ ನಿಜಗುಣ ಶಿವಯೋಗಿ (ಮುಂದುವರಿದಿದೆ)

ಸಿದ್ಧಯ್ಯ ಪುರಾಣಿಕ, ಶ್ರೀಗಿರಿ, 4/5ಎ, ಅಲಿಯಾಸ್ಕರ್ ರಸ್ತೆ, ಬೆಂಗಳೂರು-560052.

ಗಾಯಕ:. ಮಾಡಲಿಲ್ಲವೇ - ತಪವ – ಮಾಡಲಿಲ್ಲವೇ
ಕೂಡೆ ಸುಗುಣದೊಡನೆ ತಿಳಿದು
ನೋಡಿ ತ್ರಿವಿಧ ಕರಣದಲ್ಲಿ - ಮಾಡಲಿಲ್ಲವೇ ?
ಗುರುಭಜನೆ ಸುಕರ್ಮ ವೃತ್ತಿ
ಹರನ ಪೂಜೆ ಶರಣಸೇವೆ
ಪರಮ ಸಾತ್ವಿಕಂಗಳೆಂಟು
ನೆರೆದು ನೆಲೆಸಿ ತನುವಿನಲ್ಲಿ-ಮಾಡಲಿಲ್ಲವೇ ?

ವಿನಯವನ್ಯ ಹಿತವತರ್ಕ್ಯ
ವನಪ ಶಬ್ದವಚಲಿತಾರ್ಥ
ವನಘ ಮಂತ್ರನಾಗಮಂಗಳನಿತು ಪಿಡಿದು ವಚನದಲ್ಲಿ-ಮಾಡಲಿಲ್ಲವೇ ?

ಶಮ ವಿವೇಕವಾತ್ಮವಿದ್ಯೆ
ದಮೆ ದಯಾ ವಿರಕ್ತಿಯೋಗ
ವಮಳ ರೂಪ ಶಂಭುಲಿಂಗ
ವಮರ್ದು ತೋರೆ ಸುಮನದಲ್ಲಿ,·ಮಾಡಲಿಲ್ಲವೇ

ನಿರೂಪಕ:- ನಿಜಗುಣ ಶಿವಯೋಗಿಗಳ ಮನವಚನ ಕಾಯಗಳಲ್ಲಿ ನಡೆಯಿತು ತ್ರಿವಿಧ ತಪ ಅವ್ಯಾಹತವಾಗಿ ತತ್ಫಲವಾಗಿ ಅವರ ತನುವಿನಲ್ಲಿ 'ಪರಮ ಸಾತ್ವಿಕಂಗಳೆಂಟು' ನೆಲೆಸಿದುವು; ಅವರ ವಚನದಲ್ಲಿ ಅನಪಶಬ್ದ, ಅಚಲಿತಾರ್ಥ" ಗಳು ಮೈದೋರಿದುವು;

ಅವರ ಸುಮನದಲ್ಲಿ "ಶಮೆ, ವಿವೇಕ, ಆತ್ಮ ವಿದ್ಯೆ, ದಮೆ, ದಯೆ, ವಿರಕ್ತಿ, ಯೋಗ, ಅಮಳ ಶಂಭುಲಿಂಗರೂಪಗಳು ಮನೆಮಾಡಿದುವು. ಅಂತೆಯೇ ವೇದಾಂತದ ಶಿವರಾಮ ಶಾಸ್ತ್ರಿಗಳು ಸಾರಿರುವಂತೆ ಸುಜನರೊಪ್ಪುವ ತೆರದಿ ಶ್ರುತಿಗಳ ನಿಜರಹಸ್ಯವ ತೋರು'ವುದು ಅವರಿಗೆ ಸಾಧ್ಯವಾಯಿತು. ಜ್ಞಾನದ ತುತ್ತ ತುದಿಯನ್ನೇರಿದ ಈ ಮಹಾಜ್ಞಾನಿ ಅಲ್ಲಿಂದ ಭಕ್ತಿಯ ಬಾಂದೊರೆಯಾಗಿ ಕೆಳಗೆ ಹರಿದುದೊಂದು ಹಿರಿಮೆ ಅವರದು. (ಸುಜ್ಞಾನ ಸದ್ಭಕ್ತಿಗಳ ಸಂಗಮ ನಿಜವಾಗಿಯೂ ಹೃದಯಂಗಮ. ಇದೊ, ಕೇಳಿ.



ಗಾಯಕ ರಾಗ-ಶಂಕರಾಭರಣ

ನೋಡಲಾಗದೆ-ದೇವ-ನೋಡಲಾಗದೆ ?
ಕೂಡೆ ನಿನ್ನ ದಿಟ್ಟಿ ಮೂರು-ನಾಡೆಲೇಸು ಮಾಡಲೆನ್ನ, ನೋಡಲಾಗದೆ?
ಮಿಸುಕಲೀಯದೆನ್ನ ಮೋಹ
ವಿರಸವೆಂಬ ವನವನುರುಹಿ
ಭಸಿತವೆನಿಸಿ ರುದ್ರ ನಿನ್ನ
ನೊಸಲ ವಹ್ನಿ-ನೇತ್ರದಿಂದ-ನೋಡಲಾಗದೆ?
ಕಲುಷ ತಿಮಿರ ಮುಸುಕಿ ಮುಗಿದು
ನಲಿಯದೆನ್ನ ಹೃದಯನಳಿನ-
ವಲರೆ ದಿವ್ಯರೂಪ ನಿನ್ನ
ಬಲದ ಭಾನು ನಯನದಿಂದೆ-ನೋಡಲಾಗದೆ ?
ಕರಣ ಕುಲ ಚಕೋರಿ ತಣಿಯೆ
ಹರುಷ ಶರಧಿ ಮೀರಲೆನ್ನ
ವರದ ಶಂಭುಲಿಂಗ ನಿನ್ನ
ವರಸುಧಾಕರಾಕ್ಷಿಯಿಂದೆ-ನೋಡಲಾಗದೆ ?

ನಿರೂಪಕ:

ನಿಜಗುಣರ ಜ್ಞಾನ ನಿಜಜ್ಞಾನ, ನಿಜಗುಣರ ಭಕ್ತಿ ನಿಜಭಕ್ತಿ 'ಕಾಲ'ಕರ್ಮ, ಮಾಯೆಯೆಂಬಿವನು ಗೆಲಬಹುದು ವಿಶಾಲ ಮತಿಗಳು ಶಿವಭಕ್ತಿಯುಕ್ತರಾಗಿರೆ. ಎಂಬ ವಿಶ್ವಾಸ ಅವರದು, ಆಶ್ವಾಸನೆ ಅವರದು. ಈ ಭಕ್ತಿಯನ್ನು ಸಾಧಿಸುವುದು ಹೇಗೆ? ಅದೊ, ವನದ ಕೋಗಿಲೆ 'ಕೂಹು, ಕೂಹು' ಎಂದು ಪೂಜಿಸುತ್ತಿದೆ. ಆ ವನದ ಕೋಗಿಲೆಯ ಕುಜನವನ್ನು ಕೇಳಿದ ನಿಜಗುಣರು ಮನದ ಕೋಗಿಲೆಗೆ ಏನು ಹೇಳುತ್ತಲಿದ್ದಾರೆ ?

ಗಾಯಕ ರಾಗ:- ತೋಡಿ

ಕೋಗಿಲೆ, ಚೆಲ್ವ ಕೋಗಿಲೆ, ಮುದ್ದು ಕೋಗಿಲೆ ಜಾಣಕೋಗಿಲೆ ||
ಹಿಂದೆ ತಪದೊಳೀಶನೊಂದಿರುತಿರಲೆಚ್ಚು

ಹಿಂದೆ ಕಾಮನ ಬಿಟ್ಟ ಕೋಗಿಲೆ
ಬಂದು ಬೇಗದಿ ಬಾರೆಂದುಧರನ ಕೂಡಿ
ಕುಂದದೆ ನೀ ಬಾಳು ಕೋಗಿಲೆ ||
ಮನು ಮುನಿಗಳ ನೀತಿಯನು ಕೆಡಿಸುವ ದುಷ್ಟ
ಮನಸಿಜನನು ಮೀರಿ ಕೋಗಿಲೆ
ಘನಪದವನು ತನ್ನ ನೆನೆವರಿಗೊಲಿದೀವ
ಧನವಮಿತ್ರನ ಸಾರು ಕೋಗಿಲೆ ||
ನಲ್ಲರನಗಲಿದ ಮೆಲ್ಲನೆಯರ ಪೊಲ್ವ
ಪುಲ್ಲಿಶರನ ಪಿಂಗಿ ಕೋಗಿಲೆ
ಎಲ್ಲ ಜೀವರಿಗೆರವಿಲ್ಲ ದೊಲವನೀವ
ಬಲ್ಲ ಭವನೊಳಿರು ಕೋಗಿಲೆ
ಮಂಗಳರವದೊಳನಂಗನ ಬಣ್ಣಿಸೆ
ಭಂಗವಲ್ಲವೆ ನೋಡು ಕೋಗಿಲೆ ?
ಕಂಗೊಳಿಸುವ ಸರ್ವ ಮಂಗಳೆಯರಸನ
ಪಿಂಗದೆ ನೀ ಪಾಡು ಕೋಗಿಲೆ
ದುರುಳ ಕಂತುವಿನೊಡನಿರೆ ಲೋಕದೊಳು ನಿನ್ನ
ಪರಪುಟ್ಟನೆಂಬರು ಕೋಗಿಲೆ
ಧರೆಗೆ ಜನಕನಾದ ಗುರುಶಂಭುಲಿಂಗದ
ಚರಣಪಲ್ಲವೆ ಪಿಡಿ ಕೋಗಿಲೆ

ನಿರೂಪಕ:

ಮನದ ಕೋಗಿಲೆ "ಗುರು ಶಂಭುಲಿಂಗದ ಚರಣಪಲ್ಲವ ಪಿಡಿ"ಯ ಭಕ್ತಿ ಸಾಧಿಸದಿರುವುದೆ ? ಭಕ್ತಿಯಾಯಿತು. ಜ್ಞಾನವಾಯಿತು. ಇನ್ನೊಂದು ಉಳಿದಿದೆ ನಿಜಗುಣರ ತ್ರಿಪುಟರಲ್ಲದೆ. ಅದೇ ವೈರಾಗ್ಯ. ಈ ಮೂರು ಮುಪ್ಪುರಿಗೊಂಡಾಗ ಮಾನವ ಮುತ್ತಾತ್ಮ. ಈ ಮೂರರ ಮರ್ಮವನ್ನೂ ಅವರಿಂದಲೇ ತಿಳಿಯೋಣ.

ಗಾಯಕ ರಾಗ-ದೇಶಿ

ಕರುಣಿಸೆನಗಿದನೆ ಬೇಡುವೆನಭವ ಬೇರೊಂದು
ವರವನೊಲ್ಲೆನು ಮುಕ್ತಿ ದೊರೆವ ಸಾಧನವ
ಆವಕಾಲದೊಳು ಬಳಿಕಾವ ದೇಶದೊಳು ಬೇ
ರಾವ ವಸ್ತುನಿನೊಳೊಡತಿರೆಯುದತಿ ವವುಮತಿ



ಆವ ಪರಿಯೊಳು ತನ್ನ ಮೇಲಿರ್ಪದಂತೆ ಗುರು
ದೇವತೆಯೊಳನುರಾಗವಿಹುದೆ ಭಕ್ತಿ
ಅದಿದೆನ್ನದಖಿಳ ತತ್ವವನೇತಿಗಳದುಳಿದ
ಸದಮಳ ಚಿದಾನಂದ ಪೂರ್ಣ ತಾನೆಂದು
ಹೃದಯದೊಳು ನಂಬಿ ಬಹುಮತವನೆಣಿಸದೆ ಮತ್ತೆ
ಪದುಳದಿಂದಿರಲದೇ ಸಹಜ ಸುಜ್ಞಾನ ||
ಅರಿದು ವನಿತಾದಿ ವಿಷಯದೊಳುಳ್ಳ ದೋಷವನು
ತೊರೆದವನು ಮರಳಿ ಮೋಹಿಸದೆ ಛಲಿಯಾಗಿ
ಕೊರತೆಯಿಲ್ಲದ ಶಂಭುಲಿಂಗದಂತಿದೆ ಭೋಗ–
ದೆರಕವಿಲ್ಲದುದೀಗ ಪರಮ ವೈರಾಗ್ಯ ||

ನಿರೂಪಕ:- ಇಂಥ ನಿಜ ಭಕ್ತಿ, ಸಹಜ ಸುಜ್ಞಾನ, ಪರಮ ವೈರಾಗ್ಯಗಳ ಸಾಕಾರ ರೂಪದಂತಿದ್ದ ನಿಜಗುಣರು ವಿಶ್ವಕುಟುಂಬಿಗಳಾಗಿ ಲೋಕಹಿತಾರ್ಥವಾಗಿ ಕನ್ನಡದಲ್ಲಿ ಜ್ಞಾನ ಸಾಹಿತ್ಯದ ತವನಿಧಿಯೊಂದನ್ನು ಬಿಟ್ಟ ಹೋಗಿರುವರು. "ಆರೊಡನೆ ವೈರ ಮತ್ತಾರೊಡನೆ ಮಿತ್ರತ್ವ-ವಾರನ್ಯನೆನಗೆ ಗುರುವರನೆ ತವಪಾದವಾರಿಜ ದೊಳೊಂದಿದೆನಗಿನ್ನು?. ಎಂದು ಕೇಳಿದ ಆ ಮಹಾತ್ಮ ಒಂದು ಪುಟ್ಟ ಸಂಸಾರವನ್ನು ತೊರೆದು ಮಾನವ ಕುಲವೆಲ್ಲ ತನ್ನ ಕುಟುಂಬ ವೆಂದು ಭಾವಿಸಿ ಬಾಳಿದ. ಅವನ ಹೊಸ ಸಂಸಾರದ ಸೊಬಗನ್ನು ಅವನೇ ವರ್ಣಿಸಲಿ.

ಯೋಗಿಗೆ ಸಕಲ ಸಂಸಾರ ಸಂಗವವಿಲ್ಲ–
ವಾಗಿತಿಳಿವರದು ಪುಸಿನೋಡು ರಮಣಿ ||ಪ||
ಪರವಿದ್ಯೆಯೆಂಬ ಕುಲವನಿತೆಯುಂಟಗಲದ
ಪರಿತೋಷವೆಂಬ ಮೋಹದಣುಗನುಂಟು
ವಿರತಿಯೆಂಬನುಕೂಲ ಜನಮುಂಟು ಕ್ಷಮೆಯೆಂಬ
ಚರನುಂಟು ಶಾಂತಿಯೆಂಬ ಸಖನ ಸರಸಮುಂಟು
ನುತಭಕ್ತಿಯೆಂಬ ಮಾತೆಯುಂಟು ಸುಚರಿತ್ರನೆಂಬ
ಪಿತನುಂಟು ಸತ್ಯವೆಂಬ ಕುವರಿಯುಂಟು
ಹಿತವಾದ ನಂಬುಗೆಯೆಂಬಾಪ್ತ ಜನರ ಸೇವೆಯುಂಟು

ಮತಿಯೆಂಬಗೇಹ ಮುಂಟಾಚಾರವೆಂಬ ಕ್ಷೇತ್ರಮುಂಟು
ದಾಸಿಯುಂಟಹಿಂಸೆಯೆಂಬ ದಾಸನುಂಟಸ್ತೇಯವೆಂಬ
ಲೇಸನೀವ ಧರ್ಮವೆಂಬ ವಾಹನಮುಂಟು
ಭಾಸುರ ಮೈತ್ರ್ಯಾದಿಯೆಂಬ ಪೌತ್ರರುಂಟು ಮುಕ್ತಿಯೆಂಬ
ದೇಶಮುಂಟು ಶಂಭುಲಿಂಗವೆಂಬ ಗುರುತನವುಂಟು ॥

ನಿರೂಪಕ ಭಕ್ತಿಯೆಂಬ ಮಾತೆ ಸುಚರಿತ್ರವೆಂಬ ಪಿತನಿಗೆ, ಸುತನಾಗಿ, ಮತಿಯೆಂಬ ದೇಹದಲ್ಲಿ ವಾಸಿಸಿ, ವರವಿದ್ಯೆಯೆಂಬ ವನಿತೆಯ ಕೈಹಿಡಿದು, ಆಚಾರವೆಂಬ ಕ್ಷೇತ್ರದಲ್ಲಿ ಕೃಷಿಮಾಡಿ, ಪರಿತೋಷವೆಂಬ ಮಗನನ್ನೂ, ಸತ್ಯವೆಂಬ ಮಗಳನ್ನೂ ಪಡೆದ, ವಿರತಿ, ಕ್ಷಮೆ, ಶಾಂತಿ, ವಿಶ್ವಾಸ, ಅಹಿಂಸೆ, ಅಸ್ತೇಯ, ಮೈತ್ರಿಗಳೊಡನೆ ಹುದುಬಾಳಿ, ಮುಕ್ತಿಯೆಂಬ ದೇಶವನ್ನಾಳಿದ ನಿಜಗುಣರು ವಿಮಲ ಪರಂಜ್ಯೋತಿಯಾಗಿ ವಿಶ್ವಜ್ಯೋತಿಯನ್ನು ಬೆರೆದರು. ಎಂಥಜ್ಯೋತಿಯದು ?

ಗಾಯಕ ರಾಗ ನಾದನಾಮಕ್ರಿಯೆ

ಜ್ಯೋತಿ ಬೆಳಗುತಿದೆ ವಿಮಲ
ಪರಂಜ್ಯೋತಿ ಬೆಳಗುತಿದೆ
ಮಾತು ಮನಂಗಳಿಂದತ್ತತ್ತ ಮೀರಿದ
ಸಾತಿಶಯದ ನಿರುಪಾಧಿಕ ನಿರ್ಮಲ-ಜ್ಯೋತಿ ಬೆಳಗುತಿದೆ
ಶಿವಧರ್ಮ ನಾಳವೆಂಬ ಕಂಭದ ಮೇಲೆ
ಸುವಿವೇಕ ಹೃದಯೊಬ್ಜ ಪ್ರಣತಿಯೊಳು
ಸವೆಯದ ಸದ್ಭಕ್ತಿ ರಸತೈಲ ತೀವಿದ
ಪ್ರವಿಮಳ ಕಳೆಯೆಂಬ ವತ್ತಿವಿಡಿದು ದಿವ್ಯ – ಜ್ಯೋತಿ ಬೆಳಗುತಿದೆ
ಮುಸುಕಿದ ವಿಷಯಪತಂಗ ಬಿದ್ದುರುಳೆ ತಾ-
ಮಸಬುದ್ಧಿಯೆಂಬ ಕತ್ತಲೆಯಳಿಯೆ
ಮಸಗಿ ಸುಜ್ಞಾನವೆಂತೆಂಬ ಮಹಾಪ್ರಭೆ
ಪಸರಿಸಿ ಮಾಯಾ ಕಾಳಿಕೆ ಪೊರ್ದಾದನುಪಮಾ - ಜ್ಯೋತಿ ಬೆಳಗುತಿದೆ.

ವಿಮುಲ ಪರಂಜ್ಯೋತಿ ಬೆಳಗುತಿದೆ
ನಿಜಗುಣ ಜ್ಯೋತಿ ಬೆಳಗುತಿದೆ
ನಿಜಭಕ್ತಿ ಜ್ಯೋತಿ ಬೆಳಗುತಿದೆ
ನಿಜಜ್ಞಾನ ಜ್ಯೋತಿ ಬೆಳಗುತಿದೆ